## ಪ್ಯಾರಾ ಮೆಡಿಕಲ್ ಬೋರ್ಡ್

## 2016-17 ನೇ ಸಾಲಿಗೆ ಪ್ಯಾರಾ ಮೆಡಿಕಲ್ ಕೋರ್ಸ್‌ಗೆ ಪ್ರವೇಶ ಕೋರಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈ ಕೆಳಕಂಡ ನಿಂಬಂಧನೆಗಳಿಗೆ ಒಳಪಟ್ಟಿರುತ್ತಾರೆ.

1. ಕೊಟ್ಟಿರುವ ಮಾಹಿತಿಯು ಅಪೂರ್ಣವೆಂದು ಕಂಡುಬಂದಲ್ಲಿ ಅಂತಹ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
2. ಕೊಟ್ಟಿರುವ ಮಾಹಿತಿಯು ತಪ್ಪು ಎಂದು ಕಂಡುಬಂದಲ್ಲಿ ಅರ್ಜಿದಾರರ ಪ್ರವೇಶವನ್ನು ತಕ್ಷಣ ರದ್ದುಗೊಳಿಸುವ ಹಕ್ಕು ಪ್ಯಾರಾ ಮೆಡಿಕಲ್ ಬೋರ್ಡ್‌ಗೆ ಇರುತ್ತದೆ.
3. ಎಲ್ಲಾ ಪ್ಯಾರಾ ಮೆಡಿಕಲ್ ಕೋರ್ಸ್‌ಗಳ ಪ್ರವೇಶಕ್ಕೆ ಕನಿಷ್ಠ ವಯೋಮಿತಿ ವಿದ್ಯಾರ್ಥಿಯ ವಯಸ್ಸು 15 ವರ್ಷ ತುಂಬಿರಬೇಕು. ಗರಿಷ್ಠ ವಯೋಮಿತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಸೇವಾನಿರತರಿಗೆ 40 ವರ್ಷಗಳು, ಇತರರಿಗೆ 35 ವರ್ಷಗಳು ಮೀರಿರಬಾರದು.
4. ಆಯ್ಕೆಯು ಸೆಂಟ್ರಲ್ ಕೌನ್ಸಿಲಿಂಗ್ ಮೂಲಕ ನಡೆಯುವುದರಿಂದ ಒಬ್ಬ ಅಭ್ಯರ್ಥಿಯು ಒಂದೇ ಒಂದು ಅರ್ಜಿಯನ್ನು ಮಾತ್ರ ಸಲ್ಲಿಸಿ, 09 ಕೋರ್ಸ್‌ಗಳಲ್ಲಿ ಯಾವುದಾದರೊಂದನ್ನು ಆಯ್ಕೆ ಮಾಡಿಕೊಳ್ಳಲು ಕೌನ್ಸಿಲಿಂಗ್‌ನಲ್ಲಿ ಅವಕಾಶವಿರುತ್ತದೆ.
5. ಡಿಪ್ಲೋಮಾ ಇನ್ ಮೆಡಿಕಲ್ ರೆಕಾರ್ಡ್ಸ್ ಹೊರತುಪಡಿಸಿ ಇತರೆ ಎಲ್ಲಾ ಕೋರ್ಸ್‌ಗಳಿಗೂ ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಿರಬೇಕು ಮತ್ತು ವಿಜ್ಞಾನ (Physics, Chemistry & Biology/Zoology/Botany) ವಿಷಯಗಳಲ್ಲಿ ಅಭ್ಯಾಸ ಮಾಡಿರಬೇಕು. ಇವರಿಗೆ ಕೋರ್ಸ್‌ನ ಅವಧಿ 02 ವರ್ಷಗಳಾಗಿರುತ್ತವೆ.
6. ಮೆಡಿಕಲ್ ರೆಕಾರ್ಡ್ಸ್ ಕೋರ್ಸಿಗೆ ದ್ವಿತೀಯ ಪಿಯುಸಿ ಮತ್ತು ಅದಕ್ಕೆ ಸಮಾನಾಂತರ ವಿದ್ಯಾಭ್ಯಾಸವನ್ನು ಯಾವುದೇ ವಿಷಯವನ್ನು (ಆರ್ಟ್ಸ್ / ಸೈನ್ಸ್ / ಕಾಮರ್ಸ್) ತೆಗೆದುಕೊಂಡು ತೇರ್ಗಡೆಯಾಗಿರಬೇಕು ಮತ್ತು ಕಡ್ಡಾಯವಾಗಿ ಕಿರಿಯ ಆಂಗ್ಲ ಬೆರಳಚ್ಚು ಪರೀಕ್ಷೆ ಅಥವಾ ಬೇಸಿಕ್ ಕಂಪ್ಯೂಟರ್ ತರಬೇತಿ ಪರೀಕ್ಷೆ ಪಾಸಾಗಿರಬೇಕು.
7. ಎಸ್.ಎಸ್.ಎಲ್.ಸಿ. ಪಾಸಾದ ಅಭ್ಯರ್ಥಿಗಳು ಎಲ್ಲಾ ಕೋರ್ಸ್‌ಗಳಿಗೂ ಅರ್ಹರಿರುತ್ತಾರೆ. ಇವರಿಗೆ ಕೋರ್ಸ್‌ನ ಅವಧಿ 03 ವರ್ಷಗಳಾಗಿರುತ್ತವೆ.
8. ಅರ್ಜಿದಾರರು ಕನಿಷ್ಠ 07 ವರ್ಷ ಕರ್ನಾಟಕದಲ್ಲಿ ವಿದ್ಯಾಭ್ಯಾಸ ಮಾಡಿರಬೇಕು
9. ಕೋರ್ಸ್‌ಗಳಿಗೆ ಪ್ರವೇಶ ಪಡೆದವರು ಪ್ಯಾರಾ ಮೆಡಿಕಲ್ ಬೋರ್ಡ್‌ನ ನಿಯಮಾವಳಿಗಳಿಗೆ ಬದ್ಧರಾಗಿರಬೇಕು.
10. ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನದ / ಕೌನ್ಸಿಲಿಂಗ್ ತಿಳುವಳಿಕೆ ಪತ್ರ ಕಳುಹಿಸಲಾಗುವುದು.
11. ಸಂದರ್ಶನದ ಸ್ಥಳ ಮತ್ತು ದಿನಾಂಕವನ್ನು ಆನಂತರ ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.
12. ಸಂದರ್ಶನದ ವೇಳೆಯಲ್ಲಿ ಅಭ್ಯರ್ಥಿಯು ಈ ಕೆಳಕಂಡ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಬೇಕು ತಪ್ಪಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಆಯ್ಕೆಯನ್ನು ತಿರಸ್ಕರಿಸಲಾಗುವುದು.

    (**Admission will be Approved submission of original T.C**)

    1. ಮೂಲ ಅಂಕ ಪಟ್ಟಿ.
    2. ವರ್ಗಾವಣೆ ಪ್ರಮಾಣ ಪತ್ರ.
    3. ಮೀಸಲಾತಿ ದೃಡೀಕರಣ.
    4. 01 ರಿಂದ 10 ನೇ ತರಗತಿ ಅಥವಾ ಪಿಯುಸಿಯವರೆಗೆ ಕನಿಷ್ಟ 07 ವರ್ಷಗಳು ಕರ್ನಾಟಕದಲ್ಲಿ ವಿದ್ಯಾಭ್ಯಾಸ ಮಾಡಿರುವ ಬಗ್ಗೆ ಶಾಲೆ /ಕಾಲೇಜಿನಿಂದ ಪಡೆದ ದೃಡೀಕರಣ ಪತ್ರ.
    5. ಹೈದ್ರಾಬಾದ್ ಕರ್ನಾಟಕ ಮೀಸಲಾತಿ ದೃಡೀಕರಣ ಪತ್ರ (**Not below the rank of Thasildar)**.

13. **ಅರ್ಜಿ ಶುಲ್ಕ:** ಸಾಮಾನ್ಯ ಅಭ್ಯರ್ಥಿಗಳಿಗೆ ಪ್ರತಿ ಅರ್ಜಿಗೆ ರೂ.150/- ಮತ್ತು ಅಂಚೆ ಶುಲ್ಕ 15/- ಒಟ್ಟು ಮೊತ್ತ 165/- ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ/ಪ್ರವರ್ಗ-1 ರ ಅಭ್ಯರ್ಥಿಗಳಿಗೆ ರೂ.50/- ಮತ್ತು ಅಂಚೆ ಶುಲ್ಕ 15/- ಒಟ್ಟು ಮೊತ್ತ 65/- ಅರ್ಜಿ ಶುಲ್ಕವನ್ನು ಅರ್ಜಿ ಭರ್ತಿ ಮಾಡಿದ ನಂತರ ಆನ್‌ಲೈನ್ ಮೂಲಕವೇ ಪಾವತಿಸಬೇಕು.

14. ಕೌನ್ಸಿಲಿಂಗ್/ಸಂದರ್ಶನಕ್ಕೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲೇ ಬರಬೇಕಾಗಿರುತ್ತದೆ.

15. ಅರ್ಜಿ ಸಲ್ಲಿಸಿದ/ಸಂದರ್ಶನಕ್ಕೆ ಬಂದ ಅಭ್ಯರ್ಥಿಗಳಿಗೆ ಕಾಲೇಜ್/ಕೋರ್ಸ್/ಸೀಟ್ ದೊರಕಿಸಿ ಕೊಡುವ ಖಾತ್ರಿಯನ್ನು ಬೋರ್ಡ್ ನೀಡುವುದಿಲ್ಲ.

**-ಸಹಿ/-**

**ಸದಸ್ಯ ಕಾರ್ಯದರ್ಶಿಗಳು**